# ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಶಿವಮೊಗ್ಗ

## ಗ್ರಾಮೀಣ ಕೃಷಿ ಹವಾಮಾನ ಸೇವಾ ಯೋಜನೆ

## ದಕ್ಷಿಣ ಕನ್ನಡ ಜಿಲ್ಲೆಯ ಕೃಷಿ ಹವಾಮಾನ ಸಲಹಾ ಸೂಚಕ

(ಭಾರತೀಯ ಹವಾಮಾನ ಇಲಾಖೆ ಪುಣೆ ಮತ್ತು ಬೆಂಗಳೂರು ಹಾಗೂ ಗ್ರಾಮೀಣ ಕೃಷಿ ಹವಾಮಾನ ಸೇವಾ ಯೋಜನೆ,
ಬ್ರಹ್ಮಾವರ–576213, ಉಡುಪಿ ಜಿಲ್ಲೆ ಕರ್ನಾಟಕ ಇವರ ಜಂಟಿ ಪ್ರಸಾರ)


**ಹವಾಮಾನ ಮುನ್ಸೂಚನೆಯ ಅವಧಿ 15.08.2025 ರಿಂದ 19.08.2026**

ಸಂ. ಗ್ರಾ.ಕೃ.ಹ.ಸೇ.ಬ/62/2026 ದಿನಾಂಕ: 14.08.2026

**ಕಳೆದ ವಾರದ ಪರಿಸ್ಥಿತಿ (ದಿನಾಂಕ: 12.08.2026 ರಿಂದ 14.08.2026 ರವರೆಗೆ)**

| ಹವಾಮಾನದ ಅಂಶಗಳು | ದಿನ–1 (12.08.2026) | ದಿನ–2 (13.08.2026) | ದಿನ–3 (14.08.2026) |
|---|---|---|---|
| ಮಳೆ (ಮಿ.ಮೀ.) | 14.8 | 13.8 | 18.7 |
| ಗರಿಷ್ಠ ಉಷ್ಣಾಂಶ (ಡಿ.ಸೆ.) | 30 | 30.1 | 30 |
| ಕನಿಷ್ಠ ಉಷ್ಣಾಂಶ (ಡಿ.ಸೆ.) | 25.3 | 24.9 | 24.4 |
| ಸ್ಥಳೀಯ ಮೋಡಗಳ ಹೊದಿಕ (ಒಕ್ಟಾ) | 5 | 7 | 7 |
| ಗರಿಷ್ಠ ಆರ್ದ್ರತೆ (ಶೇ.) | 97 | 97 | 96 |
| ಕನಿಷ್ಠ ಆರ್ದ್ರತೆ (ಶೇ.) | 80 | 86 | 75 |
| ಗಾಳಿಯ ವೇಗ (ಕಿ.ಮೀ./ಗಂಟೆಗೆ) | 0 | 0 | 0 |

**ಭಾರತೀಯ ಹವಾಮಾನ ಇಲಾಖೆ ಪುಣೆ ಮತ್ತು ಬೆಂಗಳೂರು, ಇವರು ದಕ್ಷಿಣ ಕನ್ನಡ ಜಿಲ್ಲೆಗೆ ಮುಂದಿನ ಐದು ದಿನಗಳು ದಿನಾಂಕ 15.08.2026 ರಿಂದ 19.08.2026ರ ವರೆಗೆ ಲಭ್ಯವಿರುವ ಹವಾಮಾನ ಮುನ್ಸೂಚನೆ ಈ ಕೆಳಕಂಡಂತೆ ನೀಡಿರುತ್ತಾರೆ**

| ಹವಾಮಾನದ ಅಂಶಗಳು | ಕ್ರೂಢೀಕರಿಸಿದ ಹವಾಮಾನ ಮುನ್ಸೂಚನೆ | | | | |
|---|---|---|---|---|---|
| | ದಿನ–1 (15.08.2026) | ದಿನ–2 (16.08.2026) | ದಿನ–3 (17.08.2026) | ದಿನ–4 (18.08.2026) | ದಿನ–5 (19.08.2026) |
| ಮಳೆ ಪ್ರಮಾಣ (ಮಿ.ಮೀ.) | 14 | 12 | 12 | 10 | 10 |
| ಗರಿಷ್ಠ ಉಷ್ಣಾಂಶ (°C) | 30 | 30 | 31 | 30 | 30 |
| ಕನಿಷ್ಠ ಉಷ್ಣಾಂಶ (°C) | 24 | 24 | 24 | 24 | 23 |
| ಮೋಡದ ಹೊದಿಕೆ (ಒಕ್ಟಾ) | 8 | 8 | 8 | 8 | 8 |
| ಗರಿಷ್ಠ ಆರ್ದ್ರತೆ (ಶೇ.) | 96 | 96 | 96 | 95 | 95 |
| ಕನಿಷ್ಠ ಆರ್ದ್ರತೆ (ಶೇ.) | 78 | 75 | 73 | 73 | 65 |
| ಗಾಳಿಯ ವೇಗ (Kmph) | 4 | 6 | 4 | 6 | 4 |
| ಗಾಳಿಯ ದಿಕ್ಕು (°) | 243 | 261 | 207 | 217 | 146 |

**ಭಾರತ ಹವಾಮಾನ ಇಲಾಖೆ, ನವದೆಹಲಿ ಮತ್ತು ರಾಜ್ಯ ಹವಾಮಾನ ಇಲಾಖೆ, ಬೆಂಗಳೂರು ಇವರು ನೀಡಿರುವ ವಿಸ್ತೃತ ಮಳೆ ಮುನ್ಸೂಚನೆಯ ಪ್ರಕಾರ ಕರ್ನಾಟಕದ ಕರಾವಳಿ ತೀರ ಹಾಗೂ ದಕ್ಷಿಣ ಕನ್ನಡ ಜಿಲ್ಲೆಗೆ ದಿನಾಂಕ 20.08.2026 ರಿಂದ 26.08.2026 ರವರೆಗೆ ವಾಡಿಕೆಗಿಂತ ಕಡಿಮೆ ಮಳೆಯಾಗುವ ಸಂಭವವಿದೆ.**

## ಹವಾಮಾನ ಪರಿಸ್ಥಿತಿ ಮತ್ತು ಮುನ್ಸೂಚನೆ ಸಾರಾಂಶ

ಭಾರತೀಯ ಹವಾಮಾನ ಇಲಾಖೆ ಪುಣೆ ಮತ್ತು ಬೆಂಗಳೂರು ಇವರು, ದಕ್ಷಿಣ ಕನ್ನಡ ಜಿಲ್ಲೆಗೆ ನೀಡಿದ ಮುನ್ಸೂಚನೆಯ ಪ್ರಕಾರ, **ಮುಂದಿನ ಐದು ದಿನಗಳಲ್ಲಿ ಹಲವೆಡೆ ಸಾಧಾರಣ ಮಳೆಯಾಗುವ ಸಂಭವವಿದೆ.** ಮುಂದಿನ ಐದು ದಿನಗಳಲ್ಲಿ ಗರಿಷ್ಠ ತಾಪಮಾನವು **30.0 °C -31.0°C** ಇರುತ್ತದೆ ಮತ್ತು ಕನಿಷ್ಠ ತಾಪಮಾನವು **24.0 °C -24.0°C** ಇರುತ್ತದೆ. ಸರಾಸರಿ ಸಾಪೇಕ್ಷ ಆದ್ರತೆಯು ಬೆಳಗಿನ ಸಮಯದಲ್ಲಿ **95%** ರಿಂದ **96%** ರಷು ಇರುತ್ತದೆ. ಹಾಗೂ ಮಧ್ಯಾಹ್ನದ ಸಮಯದಲ್ಲಿ **65%** ರಿಂದ **78%** ರಷ್ಟು ಇರುತ್ತದೆ. ಸರಾಸರಿ ಗಾಳಿಯ ವೇಗವು **04-06** ಕೀ.ಮೀ. ಪ್ರತಿ ಘ,ವೇಗದಲ್ಲಿ ಬೀಸಲಿದೆ. ಈ ಹವಾಮಾನ ಪರಿಸ್ಥಿತಿಯನ್ನು ಪರಿಗಣಿಸಿದರೆ, ರೈತರು ಈ ಕೆಳಕಂಡ ಕೃಷಿ ಸಲಹೆಗಳನ್ನು ಅನುಸರಿಸುವಂತೆ ಸಲಹೆ ನೀಡಲಾಗಿದೆ.

**Mobile Applications developed by India Meteorological Department for the benefit of Farming Community Farmers are suggested to download the app using below links**

| | Mausam: | Meghdoot: | Damini: |
|---|---|---|---|
| Andriod: | https://play.google.com/store/apps/details?id=com.imd.masuam | https://play.google.com/store/apps/details?id=com.aas.meghdoot | https://play.google.com/store/apps/details?id=com.lightening.live.damini |
| Apple OS: | https://apps.apple.com/us/app/id1522893967 | https://apps.apple.com/in/app/meghdoot/id1474048155 | https://apps.apple.com/app/id1502385645 |

**Decadal Rainfall (mm) Comparison:**

| Year | 30 years Mean | 2014 | 2015 | 2016 | 2017 | 2018 | 2019 | 2020 | 2021 | 2022 | 2023 | 2024 | 2025 | 2026 |
|---|---|---|---|---|---|---|---|---|---|---|---|---|---|---|
| Rainfall | 3783.8 | 2816.3 | 2383.4 | 2827.1 | 3000 | 3381.2 | 4118.4 | 4110.8 | 4110.8 | 3879.9 | 3456.2 | 4511.1 | 5425.0 | 1425.0 |
| Rainy days | 108 | 112 | 107 | 119 | 121 | 112 | 123 | 126 | 152 | 125 | 110 | 137 | 142 | 48 |

| Realised Rainfall (02.nd JULY to 08TH JULY, 2026) | Rainfall Forecast Map (10.TH JULY to 16TH JULY, 2026) |
|---|---|
|  |  |





| Warnings for Costal Karnataka | |
|---|---|
| **Date of Issue: August 14, 2026** | |
| Day 1:August 14, 2026 | No warning |
| Day 2: August 15, 2026 | No warning |
| Day 3: August 16, 2026 | No warning |
| Day 4: August 17, 2026 | No warning |
| Day 5: August 18, 2026 | No warning |
| Day 6: August 19, 2026 | No warning |
| Day 7: August 20, 2026 | No warning |

**ಸಾಮಾನ್ಯ ಸಲಹೆ:**

| |
|---|
| ರೈತರು ತೋಟ ಮತ್ತು ಗದ್ದೆಗಳಲ್ಲಿ ಮಳೆಯ ನೀರು ನಿಲ್ಲದಂತೆ ಬಸಿಗಾಲುವೆ ಮಾಡುವುದು ಉತ್ತಮ |
| ರೈತರು ಭತ್ತದ ಮುಖ್ಯ ಗದ್ದೆಗಳಲ್ಲಿ 2ನೇ ಹ0ತದ ಮೇಲುಗೊಬ್ಬರ ನೀಡುವುದು |
| ರೈತರು ಅಡಿಕೆಗೆ 2ನೇ ಸುತ್ತಿನ ಬೋರ್ಡೋ ದ್ರಾವಣವನ್ನು ಬಿಡುವಿನ ವಾತಾವರಣದಲ್ಲಿ ಸಿಂಪಡಿಸಬಹ್ಮದು |

## ದಕ್ಷಿಣ ಕನ್ನಡ ಜಿಲ್ಲೆಗೆ ನೀಡಿದ ಹವಾಮಾನ ಮುನ್ಸೂಚನೆ ಆಧಾರಿಸಿ ನೀಡಿದ ಕೃಷಿ ಸಲಹೆಗಳು

### ತೋಟಗಾರಿಕೆ ಬೆಳೆಗಳು:

| ಬೆಳೆ | ಹಂತ | ಕೀಟ/ರೋಗ/ಸಲಹೆ | ಹವಾಮಾನಾಧಾರಿತ ಸಲಹೆ |
|---|---|---|---|
| ಅಡಿಕೆ | ಕಾಯಿ ಆಗುವ ಹಂತ | ಸಾಮಾನ್ಯ ಸಲಹೆ | ➢ ಮುಂಗಾರು ಆರಂಭವಾಗುತ್ತಿರುವ ಹಿನ್ನಲೆಯಲ್ಲಿ ರೈತರು ತಮ್ಮ ಜಮೀನಿನಲ್ಲಿ ಬಸಿಗಾಲುವೆ ವ್ಯವಸ್ಥೆಯನ್ನು ಕಲ್ಪಿಸುವುದು ಸೂಕ್ತವಾಗಿದೆ. |
| | | ಸಾಮಾನ್ಯ ಸಲಹೆ | ➢ ರೈತರು ಅಡಿಕೆ ಗಿಡದ ಕೆಳಭಾಗದ ಎಲೆಗಳಲ್ಲಿ ಸುಟ್ಟ ರೀತಿಯ ಲಕ್ಷಣ ಕಂಡುಬಂದರೆ ಶೇಕಡ 1ರ ಬೋರ್ಡೋ ದ್ರಾವಣವನ್ನು ಸಿಂಪಡಿಸಿ |
| | | ಬಸಿಗಾಲುವೆ | ➢ ರೈತರು ನೀರು ನಿಲ್ಲುವಿಕೆಯನ್ನು ತಡೆಗಟ್ಟಲು ಬಸಿಗಾಲುವೆ ವ್ಯವಸ್ಥೆಯನ್ನು ಕಲ್ಪಿಸುವುದು ಸೂಕ್ತವಾಗಿದೆ. |
| | | ಸಸಿ ನೆಡುವುದು | ➢ ಎತ್ತರ ಪ್ರದೇಶದಲ್ಲಿ ಅಡಿಕೆ ಗಿಡ ನಾಟಿ ಮಾಡಲು ಸೂಕ್ತ ಸಮಯ. ಗಿಡದಿಂದ ಗಿಡಕ್ಕೆ '9 X 9' ಅಡಿ ಅಂತರದಲ್ಲಿ ನಾಟಿ ಮಾಡಬೇಕು.<br>➢ ಅಡಿಕೆ ತೋಟದಲ್ಲಿ ಎರಡು ಸಾಲುಗಳ ಮಧ್ಯದಲ್ಲಿ ತೋಟದ ನೀರು ಬಸಿದು ಹೋಗಲು 2 ಅಡಿ ಆಳದ ಕಾಲುವೆಗಳನ್ನು ತೆಗೆಯಬೇಕು.<br>➢ ಮಣ್ಣು ಪರೀಕ್ಷೆ ಶಿಫಾರಸ್ಸಿತ ಪ್ರಮಾಣದ ಸುಣ್ಣವನ್ನು ಮಣ್ಣಿನಲ್ಲಿ ಸೇರಿಸಬೇಕು.<br>➢ '2 X 2" ಅಡಿ ಗುಂಡಿಯಲ್ಲಿ ಮೇಲ್ಮಣ್ಣು ಮತ್ತು 20ಇಾ೦ ಚೆನ್ನಾಗಿ ಕಳಿತ ಕಾಂಪೋಸ್ಟ್ ಗೊಬ್ಬರದಿಂದ ಗುಂಡಿಯನ್ನು ತುಂಬಿಸಿ ಗಿಡವನ್ನು ನೆಡಬೇಕು. |
| ತೆಂಗು | ಕಾಯಿ ಆಗುವ ಹಂತ | ಸಾಮಾನ್ಯ ಸಲಹೆ | ಮುಂಗಾರು ಆರಂಭವಾಗುತ್ತಿರುವ ಹಿನ್ನಲೆಯಲ್ಲಿ ರೈತರು ತಮ್ಮ ಜಮೀನಿನಲ್ಲಿ ಬಸಿಗಾಲುವೆ ವ್ಯವಸ್ಥೆಯನ್ನು ಕಲ್ಪಿಸುವುದು ಸೂಕ್ತವಾಗಿದೆ. |
| | | ಸಸಿ ನೆಡುವುದು | ➢ ಎತ್ತರ ಪ್ರದೇಶದಲ್ಲಿ ತೆಂಗು ಗಿಡ ನಾಟಿ ಮಾಡಲು ಸೂಕ್ತ ಸಮಯ. 2.5 – 3.0 ಅಡಿ ಉದ್ದ, ಅಗಲ ಮತ್ತು |

| | | | |
|---|---|---|---|
| | | | ಆಳದ ಗುಂಡಿಯನ್ನು ನಿರ್ಮಿಸಿ.ಅದಕ್ಕೆ ಹಟ್ಟಿ ಗೊಬ್ಬರ, ಮೇಲ್ಮಣ್ಣು ಹಾಗೂ 20 ಗ್ರಾಂ. ಫೋರೇಟ್ ಮಿಶ್ರಣವನ್ನು ಬೆರೆಸಿ.<br>➢ ಆಯ್ಕೆ ಮಾಡಿದ ಸಸಿಗಳನ್ನು ಗುಂಡಿಯ ಮಧ್ಯಭಾಗದಲ್ಲಿ ನಾಟಿ ಮಾಡಿ ಆಧಾರವನ್ನು ನೀಡಬೇಕು.<br>➢ ಹೆಚ್ಚು ಮಳೆ ಬೀಳುವ ಜಾಗದಲ್ಲಿ ಗಿಡಗಳ ಬುಡದಲ್ಲಿ ನೀರು ಶೇಖರಣೆಯಾಗದಂತೆ ನೋಡಿಕೊಳ್ಳಬೇಕು. |
| | | ಕಾಂಡ ಸೋರುವ ರೋಗ | ಕಾಂಡ ಸೋರುವ ರೋಗ ನಿಯಂತ್ರಣ ಮಾಡಲು ರೈತರು ಕಾಂಡ ಭಾಗವನ್ನು ಕೆತ್ತಿದ ನಂತರ ಶೇಕಡ 1ರ ಬೋರ್ಡೋ ಪೇಸ್ಟನ್ನು ಹಚ್ಚಬೇಕು ಅಥವಾ 2 ಮಿ.ಲೀ ಹೆಕ್ಸಾಕೊನಜೋಲ್ ಅನ್ನು ಪ್ರತಿ ಲೀಟರ್ ನೀರಿಗೆ ಬೆರಸಿ ಬುಡಕ್ಕೆ ಸುರಿಯುವುದು (ಪ್ರತಿ ಮರಕ್ಕೆ 3ಲೀಟರ್) ಅದರ ಜೊತೆಗೆ ಪ್ರತಿ ಗಿಡಕ್ಕೆ 5 ಕೆ.ಜಿಯಷ್ಟು ಬೇವಿನ ಹಿಂಡಿಯನ್ನು ನೀಡುವುದು. |
| | | ಸಾಮಾನ್ಯ ಸಲಹೆ | ➢ ತೆಂಗಿನ ತೋಟಗಳಲ್ಲಿ ಮರಗಳ ಬೇರಿನ ಸುತ್ತಮುತ್ತ ಆವರಿಸಿರುವ ಬೆಳೆ ಅವಶೇಷಗಳನ್ನು ತೆರವುಗೊಳಿಸಬೇಕು, ಇಲ್ಲದಿದ್ದರೆ ಬೇರು ವಲಯದಲ್ಲಿ ಅಧಿಕ ತೇವಾಂಶ ಸಂಗ್ರಹವಾಗಿ ಕಾಯಿ ಉದುರುವ ಸಾಧ್ಯತೆ ಹೆಚ್ಚಾಗುತ್ತದೆ |
| | | ರೈನೋಸೊರೆಸ್ ದುಂಬಿ | ➢ ಹೊಂಡದಿಂದ ಗೊಬ್ಬರವನ್ನು ಎತ್ತಿದಾಗಲೆಲ್ಲಾ ಗೊಬ್ಬರದ ಹೊಂಡಗಳಿಂದ (ಕೀಟಗಳು ಸಂತಾನೋತ್ಪತ್ತಿ ಮಾಡುವ ಸ್ಥಳ) ಜೀರುಂಡೆಯ ವಿವಿಧ ಹಂತಗಳನ್ನು ಸಂಗ್ರಹಿಸಿ ನಾಶಮಾಡಿ<br>➢ ಕೀಟಗಳ ಶಾಶ್ವತೆಯನ್ನು ಪರೀಕ್ಷಿಸಲು ಗೊಬ್ಬರದ ಹೊಂಡಗಳಲ್ಲಿ ಎಂಟೋಮೊಪಾಥೋಜೆನ್ ಅಂದರೆ ಶಿಲೀಂಧ್ರವನ್ನು (ಮೆಟಾರ್ಜೀಯಂ ಅನಿಸೊಪ್ಲಿಯಾ) ಸೇರಿಸುವುದು.<br>➢ ಪ್ರತಿ ಕಟಾವಿನಲ್ಲಿ ಮರದ ಸುಳಿಗಳನ್ನು ಪರೀಕ್ಷಿಸಿ ಮತ್ತು ದೊಡ್ಡ ಜೀರುಂಡೆಗಳನ್ನು ಹೊರತೆಗೆದು ಕೊಲ್ಲುವುದು.<br>➢ ಸುಳಿಯಲ್ಲಿರುವ ಎಲೆಗಳಲ್ಲಿ ಒಳಗಿನ ಮೂರು ಎಲೆಗಳ ತಳದಲ್ಲಿ ಪೋರೇಟ್ 10ಉ+ಮರಳು (1:2) ಪ್ರತಿ ಮರಕ್ಕೆ 150 ಗ್ರಾಂ ನಂತೆ ಸೇರಿಸುವುದು.<br>➢ ರಂಧ್ರಗಳಲ್ಲಿರುವ ಸಣ್ಣ ಚೀಲಗಳಲ್ಲಿ ಪೋರೇಟ್ 10ಉ. 5 ಗ್ರಾಂ ನ್ನು ಹಾಕಿ ಎರಡು ಒಳಗಿನ ಎಲೆಯ ಅಕ್ಷಗಳಲ್ಲಿ 6 ತಿಂಗಳ ಮಧ್ಯಂತರದಲ್ಲಿ 2 ಬಾರಿ ಇರಿಸುವುದು<br>➢ ಜೀರುಂಡೆಗಳನ್ನು ಬಲೆಗೆ ಬೀಳಿಸಲು ಮತ್ತು ಕೊಲ್ಲಲು ರೈನೋಲ್ಯೂರ್ ಫೆರೋಮೋನ್ ಬಲೆಯನ್ನು ಅರ್ಧ ಹೇಕ್ಟರ್‌ಗೆ ಅಳವಡಿಸುವುದು. |
| ಕಾಳು ಮೆಣಸು | ಶಾರೀರಿಕ ಹಂತ | ಸಾಮಾನ್ಯ ಸಲಹೆ | ಮುಂಗಾರು ಆರಂಭವಾಗುತ್ತಿರುವ ಹಿನ್ನಲೆಯಲ್ಲಿ ರೈತರು ತಮ್ಮ ಜಮೀನಿನಲ್ಲಿ ಬಸಿಗಾಲುವೆ ವ್ಯವಸ್ಥೆಯನ್ನು ಕಲ್ಪಿಸುವುದು ಸೂಕ್ತವಾಗಿದೆ. |
| | | ಶೀಘ್ರ ಸೊರಗು ರೋಗ | ಮುನ್ನೆಚ್ಚರಿಕೆ ಕ್ರಮವಾಗಿ ತೀವ್ರವಾಗಿ ರೋಗಭಾಧಿತ ಎಲೆಗಳನ್ನು ಕತ್ತರಿಸಿ ನಾಶಪಡಿಸಬೇಕು. ನಚಿತರ ಬೇವಿನ ಹಿಂಡಿಯಿಂದ ಸಮೃದ್ಧಗೊಳಿಸಿದ ಕೊಟ್ಟಿಗೆ ಗೊಬ್ಬರ (FYM) ವನ್ನು ಗಿಡದ ಬುಡಕ್ಕೆ ಹಾಕಬೇಕು ಅಥವಾ ಪ್ರತಿ ಲೀಟರ್ ನೀರಿಗೆ 3 ಗ್ರಾಂ ಕಾಪರ್ ಆಕ್ಸಿ ಕ್ಲೋರೈಡ್ ಅಥವಾ 1% ಬೋರ್ಡೋ ಮಿಶ್ರಣವನ್ನು ಬುಡಕ್ಕೆ ಹಾಕಬೇಕು |
| ಮಲ್ಲಿಗೆ | ಹೂ ಬಿಡುವ ಹಂತ | ಸಾಮಾನ್ಯ ಸಲಹೆ | ಮುಂಗಾರು ಆರಂಭವಾಗುತ್ತಿರುವ ಹಿನ್ನಲೆಯಲ್ಲಿ ರೈತರು ತಮ್ಮ ಜಮೀನಿನಲ್ಲಿ ಬಸಿಗಾಲುವೆ ವ್ಯವಸ್ಥೆಯನ್ನು ಕಲ್ಪಿಸುವುದು ಸೂಕ್ತವಾಗಿದೆ. |
| | | ಎಲೆ ಚುಕ್ಕೆ ರೋಗ | ಈ ರೋಗವನ್ನು ಸಮರ್ಪಕವಾಗಿ ನಿರ್ವಹಣೆ ಮಾಡಲು 1ಮಿ.ಲೀ ಹೆಕ್ಸಾಕೊನಾಜೋಲ್ ಅನ್ನು ಪ್ರತಿ ಲೀಟರ್ ನೀರಿಗೆ ಮಿಶ್ರಣ ಮಾಡಿ ಸಿಂಪಡಿಸುವುದು |
| ಗೇರು | ಶಾರೀರಿಕ ಹಂತ | ಸಾಮಾನ್ಯ ಸಲಹೆ | ಮುಂಗಾರು ಆರಂಭವಾಗುತ್ತಿರುವ ಹಿನ್ನಲೆಯಲ್ಲಿ ರೈತರು ತಮ್ಮ ಜಮೀನಿನಲ್ಲಿ ಬಸಿಗಾಲುವೆ ವ್ಯವಸ್ಥೆಯನ್ನು ಕಲ್ಪಿಸುವುದು ಸೂಕ್ತವಾಗಿದೆ. |
| | | ಗಿಡ ಸವರುವಿಕೆ | ಅಧಿಕ ಸಾಂದ್ರ ಬೇಸಾಯ ಪದ್ಧತಿಯಲ್ಲಿ ಗಿಡಗಳನ್ನು ಸವರಲು ಉತ್ತಮ ಸಮಯ |
| | | ಪೋಷಕಾಂಶ ನಿರ್ವಹಣೆ | ಫಲ ನೀಡುವ (ಪ್ರೌಢ) ಗೋಡಂಬಿ ಮರಗಳಿಗೆ (ಪ್ರತಿ ವರ್ಷ/ಪ್ರತಿ ಮರಕ್ಕೆ)<br>ಯೂರಿಯಾ:1 ಕೆ.ಜಿ<br>ರಾಕ್ ಫಾಸ್ಫೇಟ್: 625 ಗ್ರಾಂ (ಅಥವಾ ಅದಕ್ಕೆ ಸಮನಾದ ರಂಜಕ ರೂಪದ ಗೊಬ್ಬರ)<br>ಮ್ಯುರೇಟ್ ಆಫ್ ಪೊಟ್ಯಾಷ್ (MOP): 208 ಗ್ರಾಂ<br>ಎಳೆಯ ಗೋಡಂಬಿ ಮರಗಳಿಗೆ ಗೊಬ್ಬರ ನೀಡುವ ಪ್ರಮಾಣ:<br>1ನೇ ವರ್ಷ: ಶಿಫಾರಸ್ಸು ಮಾಡಿದ ಗೊಬ್ಬರದ 1/3 ಭಾಗ ನೀಡುವುದು<br>2ನೇ ವರ್ಷ: ಶಿಫಾರಸ್ಸು ಮಾಡಿದ ಗೊಬ್ಬರದ 2/3 ಭಾಗ ನೀಡುವುದು<br>3ನೇ ವರ್ಷದಿಂದ ಪ್ರತಿ ಮರಕ್ಕೆ 500 ಗ್ರಾಂ ಸಾರಜನಕ,125 ಗ್ರಾಂ ರಂಜಕ ಹಾಗೂ 125 ಗ್ರಾಂ ಪೊಟ್ಯಾಷ್ ನೀಡಬೇಕು. (ಇದು ಶಿಫಾರಸ್ಸು ಮಾಡಿದ ಪೂರ್ಣ ಪ್ರಮಾಣದ ಗೊಬ್ಬರವಾಗಿದೆ) |
| ತೋಟಗಾರಿಕೆ ಬೆಳೆಗಳು | ಸಾಮಾನ್ಯ ಸಲಹೆ | | ➢ ಮಳೆಗಾಲವಾಗಿರುವುದರಿಂದ ತೋಟಗಳಲ್ಲಿ ನೀರು ನಿಲ್ಲದಂತೆ ಸೂಕ್ತವಾದ ಮುಂಜಾಗ್ರತೆ ಕ್ರಮ ವಹಿಸಬೇಕು ಇಲ್ಲವಾದಲ್ಲಿ ಹಲವಾರು ರೋಗಗಳು ಬರುವ ಸಾಧ್ಯತೆಯಿರುತ್ತದೆ. |

ಕೃಷಿ ಬೆಳೆ:

| | | | |
|---|---|---|---|
| ಭತ್ತ | ತೆಂಡೆ ಹೊಡೆಯುವ ಹಂತ | ನೇರ ಬೀಜ ಬಿತ್ತನೆ | • ನೇರ ಬಿತ್ತನೆ ಭತ್ತದಲ್ಲಿ (Wet DSR) ಕಳೆ ನಿಯಂತ್ರಣಕ್ಕಾಗಿ ಬಿತ್ತನೆಯಾದ 0–3 ದಿನಗಳೊಳಗೆ ಉದಯ ಪೂರ್ವ ಕಳೆನಾಶಕಗಳನ್ನು ಬಳಸಬೇಕು. ಉದಾಹರಣೆಗೆ:<br>• ಪೆಂಡಿಮೆಥಲಿನ್ 38.7 ಅಖ @ 3 ಮಿ.ಲೀ./ಲೀಟರ್ ನೀರು ಅಥವಾ<br>• ಮೆಟ್ಸಲ್ಫ್ಯೂರಾನ್ ಮೆಥೈಲ್ (10%) + ಕ್ಲೋರಿಮ್ಯೂರಾನ್ ಎಥೈಲ್ (10%) ಘಾ @ 8 ಗ್ರಾಂ/ಎಕರೆ ಅಥವಾ<br>• ಬೆನ್ಸಲ್ಫ್ಯೂರಾನ್ ಮೆಥೈಲ್ (0.6%) + ಪ್ರೆಟಿಲಾಕ್ಲೋರ್ (6%) ಉಖ @ 4 ಕೆ.ಜಿ./ಎಕರೆ.<br>• ಒಂದು ಎಕರೆಗೆ ಸುಮಾರು 120 ಲೀಟರ್ ನೀರು (7–8 ನ್ಯಾಪ್‌ಸ್ಯಾಕ್ ಸ್ಪ್ರೇಯರ್ ಟ್ಯಾಂಕ್‌ಗಳು) ಬಳಸಬೇಕು. ಮರಳನ್ನು ಬಳಸುವಲ್ಲಿ ಒಂದು ಎಕರೆಗೆ ಬೇಕಾಗುವ ಸಂಪೂರ್ಣ ಕಳೆನಾಶಕ ದ್ರಾವಣವನ್ನು 10 ಕೆ.ಜಿ. ಮರಳಿನೊಂದಿಗೆ ಚೆನ್ನಾಗಿ ಮಿಶ್ರಣ ಮಾಡಿ ಸಮವಾಗಿ ಹರಡಬೇಕು.<br>• ಬಿತ್ತನೆಯಾದ 12–18 ದಿನಗಳೊಳಗೆ ಅಥವಾ ಕಳೆಗಳು 2–4 ಎಲೆಗಳ ಹಂತದಲ್ಲಿರುವಾಗ ಉದಯೊತ್ತರ ಕಳೆನಾಶಕಗಳನ್ನು ಬಳಸಬೇಕು. ಉದಾಹರಣೆಗೆ:<br>• ಬಿಸ್ಪೈರಿಬ್ಯಾಕ್ ಸೋಡಿಯಂ 10% ಖಾ @ 0.5 ಮಿ.ಲೀ./ಲೀಟರ್ ನೀರು ಅಥವಾ<br>• ಮೆಟ್ಸಲ್ಫ್ಯೂರಾನ್ ಮೆಥೈಲ್ (10%) + ಕ್ಲೋರಿಮ್ಯೂರಾನ್ ಎಥೈಲ್ (10%) ಘಾ @ 8 ಗ್ರಾಂ/ಎಕರೆ ಅಥವಾ<br>• ಫೆನಾಕ್ಸಾಪ್ರಾಪ್–ಪಿ–ಎಥೈಲ್ 69 + ಎಥಾಕ್ಸಿಸಲ್ಫ್ಯೂರಾನ್ 20 ಔಆಖ @ 1 ಮಿ.ಲೀ./ಲೀಟರ್ ನೀರು. |
| | | ಕೈ ನಾಟಿ ಪದ್ಧತಿ | **• ರೈತರು 18–21 ದಿನಗಳ ವಯಸ್ಸಿನ ಭತ್ತದ ಸಸಿಗಳನ್ನು ಕೈಯಿಂದ ಅಥವಾ ಭತ್ತ ನಾಟಿ ಯಂತ್ರದ (Paddy Transplanter) ಮೂಲಕ ನಾಟಿ ಮಾಡಬಹುದು. ನಾಟಿ ಮಾಡುವ ಸಮಯದಲ್ಲಿ ಪ್ರತಿ ಎಕರೆಗೆ** 24:12:30 ಕೆ.ಜಿ. N:P **:K ಪೋಷಕಾಂಶಗಳನ್ನು ನೀಡಬೇಕು. ಇದರಲ್ಲಿ ಶೇ.50 ರಷ್ಟು ನಾಟಿ ಸಮಯದಲ್ಲಿ, ಶೇ.25 ರಷ್ಟು ನಾಟಿ ಮಾಡಿದ 25–30 ದಿನಗಳ ನಂತರ ಹಾಗೂ ಉಳಿದ ಶೇ.25 ರಷ್ಟು ನಾಟಿ ಮಾಡಿದ 50–55 ದಿನಗಳ ನಂತರ ನೀಡಬೇಕು. ಕೆಳಗಿನ ಗೊಬ್ಬರ ಸಂಯೋಜನೆಗಳಲ್ಲಿ ಯಾವುದಾದರೂ ಒಂದನ್ನು ಬಳಸಬಹುದು.**<br>• ಆಯ್ಕೆ – 1: **40 ಕೆ.ಜಿ. ಯೂರಿಯಾ + 26.10 ಕೆ.ಜಿ. ಡಿಎಪಿ + 50 ಕೆ.ಜಿ. ಎಂಒಪಿ**<br>• ಆಯ್ಕೆ – 2: **52.5 ಕೆ.ಜಿ. ಯೂರಿಯಾ + 75 ಕೆ.ಜಿ. ಎಸ್‌ಎಸ್‌ಪಿ + 50 ಕೆ.ಜಿ. ಎಂಒಪಿ**<br>• ಆಯ್ಕೆ – 3: **60 ಕೆ.ಜಿ. 20:20:0 + 26.10 ಕೆ.ಜಿ. ಯೂರಿಯಾ + 50 ಕೆ.ಜಿ. ಎಂಒಪಿ**<br>• ಆಯ್ಕೆ – 4: **80 ಕೆ.ಜಿ. 15:15:15 + 26 ಕೆ.ಜಿ. ಯೂರಿಯಾ + 30 ಕೆ.ಜಿ. ಎಂಒಪಿ**<br>**• ಕಳೆ ನಿರ್ವಹಣೆಯನ್ನು ಮೇಲಿನ ನೇರ ಬಿತ್ತನೆ (Direct Seeded Rice) ವಿಧಾನದಲ್ಲಿ ತಿಳಿಸಿದಂತೆ ಅನುಸರಿಸಬೇಕು.** |
| | | ಕೊಳವೆ ಹುಳು | ಹತೋಟಿಗೆ, **ಕ್ಲೋರಾಂಟ್ರಾನಿಲಿಪ್ರೋಲ್ @ 0.5 ಮಿ.ಲೀ./ಲೀಟರ್ ನೀರು ಅಥವಾ ಕ್ಲೋರಪೈರಿಫಾಸ್ @ 2 ಮಿ.ಲೀ./ಲೀಟರ್ ನೀರು ಅಥವಾ ಬೇವಿನ ಎಣ್ಣೆ 3000 ppm @ 3 ಮಿ.ಲೀ./ಲೀಟರ್ ನೀರಿನ ಪ್ರಮಾಣದಲ್ಲಿ ಸಿಂಪಡಿಸಬೇಕು.** |
| | | ಎಲೆ ಸುರುಳಿ ಹುಳು | ಹತೋಟಿಗೆ, **ಕ್ಲೋರಾಂಟ್ರಾನಿಲಿಪ್ರೋಲ್ @ 0.5 ಮಿ.ಲೀ./ಲೀಟರ್ ನೀರು ಅಥವಾ ಕ್ಲೋರಪೈರಿಫಾಸ್ @ 2 ಮಿ.ಲೀ./ಲೀಟರ್ ನೀರು ಅಥವಾ ಬೇವಿನ ಎಣ್ಣೆ 3000 ppm @ 3 ಮಿ.ಲೀ./ಲೀಟರ್ ನೀರಿನ ಪ್ರಮಾಣದಲ್ಲಿ ಸಿಂಪಡಿಸಬೇಕು.** |

## ಜಾನುವಾರು ಸಲಹೆ:

| | |
|---|---|
| ಹಸು<br>(ಸಾಮಾನ್ಯ ಸಲಹೆ) | ➤ ದನ ಕರುಗಳಿಗೆ ಹಸಿರು ಮೇವನ್ನು ಒದಗಿಸಲು ಮೇವಿನ ಜೋಳ, ಅಲಸಂದೆ, ಗೋವಿನ ಜೋಳ ಮತ್ತು ನೇಪಿಯರ್ ಹುಲ್ಲನ್ನು ಹಾಕಲು ಸೂಕ್ತ ಸಮಯವಾಗಿದೆ.<br>➤ ಮಳೆಗಾಲವಾಗಿರುವುದರಿಂದ ಗುಡುಗು–ಸಿಡಿಲು ಬರುವ ಸಂಭವವಿರುವುದರಿಂದ ಜಾನುವರುಗಳನ್ನು ವಿದ್ಯುತ್ ಕಂಬದ ಕೆಳಗೆ, ತೆರೆದ ಪ್ರದೇಶಗಳಲ್ಲಿ ಹಾಗೂ ಮರದ ಕೆಳಗೆ ಕಟ್ಟಿಹಾಕದೆ ಕೊಟ್ಟಿಗೆಯಲ್ಲಿ ಕಟ್ಟುವುದು ಸೂಕ್ತ.<br>➤ ಗಂಟಲು ಬೇನೆ & ಚಪ್ಪೆ ರೋಗ: ಈ ರೋಗಗಳು ಮುಂಗಾರು ಸಮಯದಲ್ಲಿ ಉಲ್ಬಣವಾಗುವ ಸಂಭವವಿರುವುದರಿಂದ ಜೂನ್ ತಿಂಗಳಿನಲ್ಲಿ ಈ ರೋಗದ ವಿರುದ್ಧ ಲಸಿಕೆ ಹಾಕಿಸುವುದು ಸೂಕ್ತವಾಗಿದೆ.<br>➤ ಜಾನುವಾರುಗಳಿಗೆ ಜಂತುನಾಶಕವನ್ನು ನೀಡುವುದು & ಸಮತೋಲಿತ ಆಹಾರವನ್ನು ನೀಡುವುದರಿಂದ ಹಾಲಿನ ಇಳುವರಿ ಹೆಚ್ಚುತ್ತದೆ |

## ಸಾಮಾನ್ಯ ಸಲಹೆ:

| | |
|---|---|
| ಮಳೆ ನೀರು ಕೊಯ್ಲು ಘಟಕ | ➤ ರೈತರು ತಮ್ಮ ಜಮೀನಿನಲ್ಲಿ ಈಗಾಗಲೇ ನಿರ್ಮಿಸಿರುವ ಮಳೆ ನೀರು ಕೊಯ್ಲು ಘಟಕಗಳಾದ ಕೃಷಿ ಹೊಂಡಗಳನ್ನು ಪುನಶ್ಚೇತನಗೊಳಿಸುವುದು. ಇದರಿಂದ ರೈತರು ಬೇಸಿಗೆಯಲ್ಲಿ ನೀರಿನ ಕೊರತೆ ಎದುರಿಸುವುದನ್ನು ತಗ್ಗಿಸಬಹುದು ಹಾಗೂ ತಮ್ಮ ಆದಾಯವನ್ನು ಹೆಚ್ಚಿಸಲು ಮೀನು ಸಾಕಾಣಿಕೆಯನ್ನು ಮಾಡಬಹುದಾಗಿದೆ. |

## *ಮೀನುಗಾರಿಕೆ:*

| | |
|---|---|
| ಮೀನುಗಾರರು | ➤ ಮೀನುಗಾರರು ಮುಂದಿನ ದಿನಗಳಲ್ಲಿ ಕೈಗೊಳ್ಳುವ ಮೀನುಗಾರಿಕೆಗೆ ಉಪಯೋಗಿಸುವ ತಮ್ಮ ಉಪಕರಣಗಳನ್ನು ಸರಿಪಡಿಸಿಕೊಳ್ಳಬೇಕು |
| ಮೀನು ಮರಿ ಉತ್ಪಾದನೆ | ➤ ಕರಾವಳಿ ಮೀನು ಕೃಷಿಕರು ಮಿನು ಕೊಳದ ಪೂರ್ವ ಸಿದ್ಧತೆ ಮಾಡಿಕೊಳ್ಳಲು ಸೂಕ್ತ ಸಮಯವಾಗಿದೆ.<br>➤ ಮೀನು ಮರಿ ಪಾಲನಾ ಕೊಳಗಳಲ್ಲಿ ಸುಣ್ಣವನ್ನು ಹಾಕುವ ಮೂಲಕ ರಸಸಾರವನ್ನು 7.5 ಇರುವಂತೆ ಸರಿದೂಗಿಸುವುದು. ಅನಂತರ ಹಟ್ಟಿ ಗೊಬ್ಬರವನ್ನು ಹಾಕಿ ನೈಸರ್ಗಿಕ ಮೀನಿನ ಆಹಾರ ಉತ್ಪಾದನೆಯಿಂದ ಕೊಳದ ನೀರು ತಿಳಿ ಹಸಿರಿನಿಂದ ಕಂದು ಬಣ್ಣಕ್ಕೆ ತಿರುಗುವ ವೇಳೆಗೆ ಸಿಹಿ ನೀರು ಮೀನು ಮರಿಗಳನ್ನು ದಾಸ್ತಾನು ಮಾಡಬಹುದು. ಈ ಮರಿಗಳು ಜೂನ್ ಮತ್ತು ಜುಲೈ ತಿಂಗಳಲ್ಲಿ ಅಧಿಕೃತ ಸರಬರಾಜು ಮಾಡುವವರಲ್ಲಿ ಮಾರಾಟಕ್ಕೆ ಲಭ್ಯವಿರುತ್ತದೆ. |

(ಈ ಮೇಲಿನ ಬೆಳೆ ಸಲಹೆಯು ಹವಾಮಾನ ಇಲಾಖೆ, ಬೆಂಗಳೂರು ಇವರು ನೀಡಿರುವ ಹವಾಮಾನ ಮುನ್ಸೂಚನೆಯ ಆಧಾರವಾಗಿದೆ)


**ಶ್ರೀ. ಪ್ರವೀಣ್ ಕೆ.ಎಮ್,**
ತಾಂತ್ರಿಕ ಅಧಿಕಾರಿಗಳು,
ಜಿ.ಕೆ.ಎಮ್.ಎಸ್–ವಿಭಾಗ,
ವ.ಕೃ.ತೋ.ಸಂ.ಕೇ–ಬ್ರಹ್ಮಾವರ.

**ಡಾ. ಎನ್. ಇ. ನವೀನ್ ,**
ನೋಡಲ್ ಅಧಿಕಾರಿಗಳು,
ಜಿ.ಕೆ.ಎಮ್.ಎಸ್–ವಿಭಾಗ,
ವ.ಕೃ.ತೋ.ಸಂ.ಕೇ–ಬ್ರಹ್ಮಾವರ.